ಈ) ಕ್ರೈಸ್ತ ಸಂಸ್ಥೆಗಳು ವಿದ್ಯಾಕ್ಷೇತ್ರದಲ್ಲಿ ಉತ್ತಮವಾದ ಸೇವೆಯನ್ನು ಸಲ್ಲಿಸುತ್ತಿದ್ದು, ಇವರುಗಳ ಸಂಸ್ಥೆಗಳ ರಕ್ಷಣೆಗೆ ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೌದು

ಆ) ಹೌದು

ಇ) ಈ ವ್ಯಕ್ತಿಯನ್ನು ಪತ್ತೆ ಹಚ್ಚಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಹಾಗೂ ಇದರ ಉಸ್ತುವಾರಿಯನ್ನು ಹಿರಿಯ ಅಧಿಕಾರಿಗಳಿಗೆ ನೀಡಲಾಗಿದೆ.

ಈ) ಹೌದು

1927 (1864) ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ (ಬ್ರಹ್ಮಾವರ) :– ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಕ್ರೀಡಾ ಯೋಜನೆಯಡಿ ಉಡುಪಿ ತಾಲ್ಲೂಕಿನಲ್ಲಿ ಕೈಗೊಂಡ ಕಾರ್ಯಕ್ರಮಗಳೇನು;

ಆ) ಈ ಕಾರ್ಯಕ್ರಮಗಳಿಗಾಗಿ ಬಿಡುಗಡೆಯಾದ ಅನುದಾನವೆಷ್ಟು;

ಇ) ಬಿಡುಗಡೆಯಾದ ಅನುದಾನದಲ್ಲಿ ಯಾವ ಯಾವ ಕಾರ್ಯಕ್ರಮಗಳಿಗೆ ಎಷ್ಟೆಷ್ಟು ಹಣವನ್ನು ವೆಚ್ಚ ಮಾಡಲಾಗಿದೆ (ವಿವರ ನೀಡುವುದು)?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು):

ಅ) ಉಡುಪಿ ತಾಲ್ಲೂಕಿನಲ್ಲಿ 4 ಹೋಬಳಿಗಳಿದ್ದು, 3 ಹೋಬಳಿಗಳಲ್ಲಿ ಗ್ರಾಮೀಣ ಕ್ರೀಡಾ ಯೋಜನೆಯಡಿ ಸಾಮೂಹಿಕ ಕ್ರೀಡೆಯಲ್ಲಿ ಹಗ್ಗ ಜಗ್ಗಾಟ, ಮ್ಯೂಸಿಕಲ್‌ಚೇರ್, ವಾಕಿಂಗ್‌ರೇಸ್, 3 ಕಾಲಿನ ಓಟ, ಸ್ಲೋ ಸೈಕಲ್ ರೇಸ್ ಕ್ರೀಡೆಗಳನ್ನು ನಡೆಸಲಾಗಿದ್ದು, ಉಳಿದ ಒಂದು ಹೋಬಳಿಯಲ್ಲಿ ಏಪ್ರಿಲ್ ಮಾಹೆಯಲ್ಲಿ ಕಾರ್ಯಕ್ರಮ ನಡೆಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ಮೇಲ್ಕಂಡ ಕಾರ್ಯಕ್ರಮಗಳಿಗಾಗಿ 2006–07ನೇ ಸಾಲಿನಲ್ಲಿ ರೂ.20,000–00 ಗಳನ್ನು ಉಡುಪಿ ತಾಲ್ಲೂಕಿನ 4 ಹೋಬಳಿಗಳಿಗೆ ನಿಗಧಿಪಡಿಸಿ ಬಿಡುಗಡೆ ಮಾಡಲಾಗಿದೆ.

ಇ) ಉಪ ಪ್ರಶ್ನೆ (ಅ) ಮುಂದೆ ವಿವರಿಸಿರುವ ಕಾರ್ಯಕ್ರಮಗಳಿಗಾಗಿ ರೂ.20,000–00 ಮೊತ್ತ ಬಿಡುಗಡೆ ಮಾಡಲಾಗಿದೆ. ಅದರಲ್ಲಿ 3 ಹೋಬಳಿಗಳ ಕಾರ್ಯಕ್ರಮಗಳಿಗೆ 15,000–00 ವೆಚ್ಚವಾಗಿದ್ದು, ಉಳಿದ ಒಂದು ಹೋಬಳಿಯಲ್ಲಿ ಏಪ್ರಿಲ್ ಮಾಹೆಯಲ್ಲಿ ಈ ಕಾರ್ಯಕ್ರಮಗಳನ್ನು ನಡೆಸಲು ಹಮ್ಮಿಕೊಳ್ಳಲಾಗಿದೆ.

1928(1865) ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ (ಬ್ರಹ್ಮಾವರ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜೆ.ಎನ್.ಯು.ಆರ್.ಎಂ. ಯೋಜನೆಯ ರೂಪುರೇಷೆಗಳು;

ಆ) ಈ ಯೋಜನೆಯಡಿ ಯಾವ ಕಾರ್ಯಕ್ರಮ ಕೈಗೊಳ್ಳಲಾಗಿದೆ (ವಿವರ ಒದಗಿಸುವುದು)?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿ) :

ಅ) ವಿವರಗಳನ್ನು ಅನುಬಂಧ – 1 ರಲ್ಲಿ ಒದಗಿಸಲಾಗಿದೆ.

ಆ) ವಿವರಗಳನ್ನು ಅನುಬಂಧ – 2 ರಲ್ಲಿ ಒದಗಿಸಲಾಗಿದೆ.

ಅನುಬಂಧ – 1

ಜವಾಹರ್ ಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಧ್ಯೇಯ (ಜೆ.ಎನ್.ಎನ್.ಯು. ಆರ್.ಎಂ) ಯ ರೂಪುರೇಷೆಗಳು

ಭಾರತ ಸರ್ಕಾರವು ಪ್ರಸ್ತುತ ಆರ್ಥಿಕ ವರ್ಷದಲ್ಲಿ 'ಜವಾಹರ್ ಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಧ್ಯೇಯ (ಜೆ.ಎನ್.ಎನ್.ಯು.ಆರ್. ಎಂ) ಎನ್ನುವ ಕಾರ್ಯಕ್ರಮದಡಿಯಲ್ಲಿ ನಗರಗಳ ಸಮಗ್ರ ಅಭಿವೃದ್ಧಿಯ ಯೋಜನೆಯನ್ನು ಡಿಸೆಂಬರ್ 3 ನೇ 2005 ರಂದು ಪ್ರಾರಂಭಿಸಿದೆ. ಜೆ.ಎನ್.ಎನ್.ಯು.ಆರ್. ಎಂ ಆರ್ಥಿಕ ಸ್ವಾವಲಂಬನೆ ಸಾಧಿಸಲು, ನಗರಗಳ ಪ್ರಸ್ತುತ ಸೇವಾ ಮಟ್ಟಗಳನ್ನು ವೃದ್ಧಿಗೊಳಿಸಲು ಬೇಕಾದ ಪ್ರೋತ್ಸಾಹವನ್ನು ಕಲ್ಪಿಸುವ ಗುರಿ ಹೊಂದಿರುತ್ತದೆ. ಜೆ.ಎನ್.ಎನ್.ಯು.ಆರ್. ಎಂ ಎರಡು ಉಪ ಧ್ಯೇಯಗಳನ್ನು ಒಳಗೊಂಡಿದೆ.

1) ನಗರ ಮೂಲಸೌಕರ್ಯ ಮತ್ತು ಆಡಳಿತ

2) ನಗರದ ಬಡವರಿಗೆ ಮೂಲಭೂತ ಸೌಕರ್ಯ ಸೇವೆಗಳು

ಜೆ.ಎನ್.ಎನ್.ಯು.ಆರ್. ಎಂ ನ ಪ್ರಾಥಮಿಕ ಉದ್ದೇಶವು ಆರ್ಥಿಕವಾಗಿ ಫಲದಾಯಕ, ಸಮರ್ಥ, ಸಮಾನತೆ ಮತ್ತು ಪ್ರತಿಕ್ರಿಯಿಸುವ ನಗರಗಳನ್ನು ನಿರ್ಮಿಸುವುದರಲ್ಲಿ ಈ ಕೆಳಕಂಡವುಗಳನ್ನು ಕೇಂದ್ರೀಕರಿಸಿದೆ.